ಅದರ ವೈಫಲ್ಯಕ್ಕೆ ಕಾರಣ. ಪ್ರಗತಿಪರವಾದಿ ಬಂಡವಾಳ ಶಾಹಿ ಪದ್ಧತಿಯು ಸರ್ಕಾರದ ದಖಲಂದಾಜು ಹೆಚ್ಚಿಸುತ್ತಲೇ, ಹೆಚ್ಚಿನ ಜನರ ಸಂಕ್ಷೇಮದ ಉದ್ದೇಶದಿಂದ ಕೆಲಸ ಮಾಡುತ್ತಾ ಸರ್ಕಾರದ ಪಾತ್ರವನ್ನು ತಕ್ಕಮಟ್ಟಿಗೆ ಉನ್ನತ ಸ್ಥಾನಕ್ಕೆ ಒಯ್ಯುತ್ತದೆ. ಪರಿಸರನಾಶದ ದುಷ್ಪರಿಣಾಮಗಳನ್ನು ತಕ್ಷಣಕ್ಕೆ ಮಾಪನ ಮಾಡಲು ಸಾಧ್ಯವಾಗದ ಸಂದರ್ಭದಲ್ಲಿ ಸರ್ಕಾರದ ಪಾತ್ರ ಹೆಚ್ಚಾಗಬೇಕಾದದ್ದು ಸಹಜವೇ.

ಎಲ್ಲಕ್ಕಿಂತ ಮುಖ್ಯವಾಗಿ ಸ್ಟಿಗ್ಲಿಟ್ಸ್ ನಮ್ಮ ಅರ್ಥವ್ಯವಸ್ಥೆಯಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರದ ಬಗ್ಗೆಯೂ ಮಾತನಾಡುತ್ತಾರೆ. ಆಧುನಿಕ ಅರ್ಥಶಾಸ್ತ್ರಜ್ಞರು ಸಹಕಾರ ವ್ಯವಸ್ಥೆಯ ಬಗ್ಗೆ ಮಾತಾಡಿರುವುದು ಕಡಿಮೆಯೇ. ಆದರೆ ಸ್ಟಿಗ್ಲಿಟ್ಸ್ ಜಾಗತಿಕ ಆರ್ಥಿಕ ಬಿಕ್ಕಟ್ಟನ್ನು ಉಂಟುಮಾಡಿದ 2008ರ ಘಟನಾವಳಿಯ ಹಿನ್ನೆಲೆಯಲ್ಲಿ ಸಹಕಾರ ವ್ಯವಸ್ಥೆಯನ್ನು ಚರ್ಚಿಸುತ್ತಾರೆ. ಸಣ್ಣ ಸ್ಥಳೀಯ ಸಹಕಾರ ವ್ಯವಸ್ಥೆಯಿಂದ ಆರ್ಥಿಕ ವ್ಯವಹಾರಗಳನ್ನು ವಿಕೇಂದ್ರೀಕೃತವಾಗಿ ಕೈಗೊಂಡಾಗ ಅವು ಹೆಚ್ಚು ಜನಸ್ನೇಹಿ ಮತ್ತು ಸಮೂಹವನ್ನು ಒಳಗೊಳ್ಳುವ ಪದ್ಧತಿಯಿಂದ ಮುಂದುವರೆದು ದೊಡ್ಡ ರಾಕ್ಷಸಾಕಾರದ ಖಾಸಗಿ ಸಂಸ್ಥೆಗಳ ನಿರ್ಮಾಣವನ್ನು ತಡೆಯುತ್ತವೆ. ಸಮಾಜದಲ್ಲಿ ಯಾವುದೇ ವ್ಯಾಪಾರ ಕುಸಿಯುವ ಸಾಧ್ಯತೆಯಿದೆ. ಆದರೆ ಅತಿ ದೊಡ್ಡ ಸಂಸ್ಥೆಗಳು ಕುಸಿದಾಗ ಆಗುವ ದುಷ್ಪರಿಣಾಮ ವ್ಯಾಪಕವಾದದ್ದು ಎನ್ನುವುದನ್ನು ನಾವು 2008ರ ಬಿಕ್ಕಟ್ಟಿನಲ್ಲಿ ಕಂಡಿದ್ದೇವೆ. ಬಂಡವಾಳವೇ ಕೇಂದ್ರವಾಗದ ಜನಕೇಂದ್ರಿತ ವ್ಯವಸ್ಥೆಯನ್ನು ಸಹಕಾರ ಒದಗಿಸಿಕೊಡುತ್ತದೆ. ಸಹಕಾರ ವ್ಯವಸ್ಥೆ ಹೂಡಿಕೆಗೆ ತಕ್ಕ ಗೌರವವನ್ನು ನೀಡುತ್ತದೆ. ಅದೇಕಾಲಕ್ಕೆ ಇತರ ಸೇವೆಗಳಿಗೂ ನ್ಯಾಯ ಸಮ್ಮತ ಪರಿಹಾರವನ್ನು ನೀಡುತ್ತದೆ. ಸಹಕಾರಿ ಪತ್ತಿನ ಸಂಘಗಳು ಜನರ ಉಳಿತಾಯ ಮತ್ತು ಸಾಲದ ಅವಶ್ಯಕತೆಗಳನ್ನು ಸ್ಥಳೀಯವಾಗಿ ತಕ್ಕಮಟ್ಟಿಗೆ ಪರಿಹರಿಸಿ, ಉಳಿದ ಅಧಿಕ ಅವಶ್ಯಕತೆಗಳಿಗೆ ಮಾರುಕಟ್ಟೆಯ ಮೊರೆ ಹೋಗುತ್ತವೆ. ಈ ರೀತಿಯ ವ್ಯವಸ್ಥೆಯಿದ್ದಾಗ ಸ್ಥಳೀಯ ಖರ್ಚುಗಳೂ ಸೀಮಿತವಾಗಿರುತ್ತವೆ. ಸ್ಥಳೀಯವಾಗಿಯೇ ವ್ಯವಹಾರಗಳು ನಡೆಯುವುದರಿಂದ ಲಾಭಾಂಶವೂ ಸ್ಥಳೀಯವಾಗಿ ಸಮುದಾಯದಲ್ಲಿಯೇ ಉಳಿಯುತ್ತದೆ. ನಮ್ಮ ಆರ್ಥಿಕ ವ್ಯವಸ್ಥೆಯನ್ನು ಆಮೂಲಾಗ್ರ ಬದಲಾಯಿಸಿ ಸಹಕಾರಿ ವ್ಯವಸ್ಥೆಯತ್ತ ಹೋಗಬೇಕೆನ್ನುವ ಕ್ರಾಂತಿಕಾರಿ ನಿಲುವನ್ನು ಸ್ಟಿಗ್ಲಿಟ್ಸ್ ಪ್ರತಿಪಾದಿಸುವುದಿಲ್ಲವಾದರೂ, ನಾವು ಅರ್ಥವ್ಯವಸ್ಥೆಯನ್ನು ಕಾಣುವ, ವಿಶ್ಲೇಷಿಸುವ ರೀತಿಯನ್ನು ಮೂಲಭೂತವಾಗಿ ಬದಲಾಯಿಸಬೇಕೆಂದು ಆತ ಹೇಳುತ್ತಾರೆ. ಬಂಡವಾಳ ಕೇಂದ್ರಿತ ವ್ಯವಸ್ಥೆಯ ದಕ್ಷತೆ ಮತ್ತು ಲಾಭಾಂಶದ ಭಾಷೆಯನ್ನು ತುಸುವಾದರೂ ಬದಲಾಯಿಸಿದರೆ, ವಿಸ್ತೃತವಾದ- ಎಲ್ಲವನ್ನೂ ಒಳಗೊಳ್ಳುವ- ಪ್ರಗತಿಪರ ಬಂಡವಾಳಶಾಹಿ ಪದ್ಧತಿಯು ನಮ್ಮದಾಗಬಹುದೆಂದು ಅವರು ವಾದಿಸುತ್ತಾರೆ.

ಇಲ್ಲಿನ ವಾದಗಳೆಲ್ಲವೂ ಆರ್ಥಿಕ ನೆಲೆಯಲ್ಲಿ ಮಂಡಿಸಲಾಗಿದೆಯಾದರೂ, ರಾಜಕೀಯ ವ್ಯವಸ್ಥೆಯಲ್ಲೂ ಕೇಂದ್ರೀಕರಣವನ್ನು ಬಿಟ್ಟು ಸಂವಾದ ಪೂರಕ, ಸಂವಾದಪೂರ್ವಕ, ವಿಕೇಂದ್ರೀಕೃತ ವ್ಯವಸ್ಥೆಯೇ ಸಮತಾವಾದದ ಸಮಾಜಕ್ಕೆ ಪೂರಕವಾದದ್ದು ಎನ್ನುವುದನ್ನು ಮನಗಾಣಬೇಕು. ಸರ್ಕಾರದ ಪಾತ್ರವನ್ನು ಕುಗ್ಗಿಸಿ ಮಾರುಕಟ್ಟೆಯ ಪಾತ್ರವನ್ನು ಹಿಗ್ಗಿಸಬೇಕೆನ್ನುವ ವಾದವನ್ನು ಸಂದೇಹದಿಂದ ನೋಡುತ್ತಲೇ, ಸರ್ಕಾರದ ಪಾತ್ರವನ್ನು ಹೊಸದಾಗಿ ಪರಿಭಾಷಿಸುವ ಅವಶ್ಯಕತೆಯಿದೆ. ಸರ್ಕಾರವೇ ಮಾರಕಟ್ಟೆಯಲ್ಲಿ ಪಾತ್ರಧಾರಿಯಾಗಬೇಕು ಎನ್ನುವುದನ್ನು ಸ್ಟಿಗ್ಲಿಟ್ಸ್ ಪ್ರತಿಪಾದಿಸುವುದಿಲ್ಲ. ಆದರೆ ಸರ್ಕಾರದ ಪಾತ್ರ ನಗಣ್ಯವಾಗಿರಬೇಕೆನ್ನುವ ವಾದವನ್ನು ಅವರು ನಿರಾಕರಿಸುತ್ತಾರೆ. ವ್ಯಾಪಾರ ಕೈಗೊಳ್ಳುವವರಿಗೆ ತಕ್ಕ ವಾತಾವರಣ ಒದಗಿಸಿಕೊಡುವುದೂ ಸರ್ಕಾರದ ಮುಖ್ಯ ಪಾತ್ರ. ಈ ವಾತಾವರಣವು – ಕಾನೂನು, ನಿಯಮಾವಳಿಗಳನ್ನು ರೂಪಿಸುವುದರಿಂದ ಸಾಧ್ಯವಾಗುತ್ತದೆ. ಈ ನಿಯಮಾವಳಿಗಳು ವ್ಯಾಪಾರದ ಸ್ವಾತಂತ್ರ್ಯದ ಮಿತಿಗಳನ್ನು ಗುರುತಿಸುವ ನಿಟ್ಟಿನಲ್ಲಿ ಮುಂದುವರೆಯಬೇಕು. ಸ್ವಾತಂತ್ರ್ಯಕ್ಕೆ ತಕ್ಕಮಟ್ಟಿನ ಕಡಿವಾಣ ಹಾಕುವುದರಲ್ಲಿಯೇ ಸಮ ಸಮಾಜ ಮತ್ತು ತಲೆಮಾರುಗಳ ಅಂತರದಲ್ಲಿನ ಅಸಮಾನತೆಯನ್ನೂ, ಮಾನವ-ಪರಿಸರದ ಅಸಮತೋಲವನ್ನು ತಡೆಯುವುದರಲ್ಲೂ ಸರ್ಕಾರದ ಪ್ರಮುಖ ಪಾತ್ರವಿದೆ. ಆ ಪಾತ್ರದ ಮಿತಿ ಮತ್ತು ಸಾಧ್ಯತೆಗಳನ್ನು ನಾವು ಪರಿಶೀಲಿಸಬೇಕಾಗಿದೆ. ●